ಬಾಗಲಕೋಟೆಯಲ್ಲಿ ಟರ್ಕಿ ದೇಶದ ಸಜ್ಜೆ

ಒಣ ಭೂಮಿ ರೈತನ ಹೊಸ ಪ್ರಯೋಗ । ನಾಲ್ಕು ಪಟ್ಟು ಏರಿದ ಆದಾಯದ ಬುತ್ತಿ

■ **ಶಾಂತಣ್ಣ ಸರಗಣಚಾರಿ** ಇಳಕಲ್ (ಬಾಗಲಕೋಟೆ)

ಮಳೆ ಬೇಡ, ರಾಸಾಯನಿಕ ಗೊಬ್ಬರ ಬೇಡ, ಹೆಚ್ಚು ಪರಿಶ್ರಮದ ಹಂಗೂ ಇಲ್ಲ. ಆದರೆ ಬಂಪರ್ ಬೆಳೆ. ಇದು ಟರ್ಕಿ ಸಜ್ಜೆ ಮ್ಯಾಜಿಕ್. ಇಳಕಲ್ ಸಮೀಪದ ಹೇರೂರ ಗ್ರಾಮದ ರೈತ ಹೋರಾಟಗಾರ ಬಸವರಾಜ ಹುಡೇದಮನಿ ಅವರ ಪುತ್ರ ರಾಜಶೇಖರ್ ಹೊಲವೀಗ ರೈತರ ಪ್ರವಾಸಿ ತಾಣವಾಗಿ ಮಾರ್ಪಾಟಾಗಿದೆ.ಅವರ ಟರ್ಕಿ ಸಜ್ಜೆ ಬಿತ್ತನೆ ಪ್ರಯೋಗ ಫಲ ನೀಡಿದೆ. 3 ತಿಂಗಳಲ್ಲಿಯೇ ಭಾರಿ ಪ್ರಮಾಣದಲ್ಲಿ ಬೆಳೆದು ಈ ಭಾಗದ ರೈತರಿಗೆ ಹುಬ್ಬೇರಿಸುವಂತೆ ಮಾಡಿದೆ.ಒಂದು ಬೀಜದಲ್ಲಿ 8-10 ಟೊಂಗೆಗಳು ಬೆಳೆದಿವೆ. 5 ಅಡಿ ಎತ್ತರದ ದಂಟಿಗೆ ಎಲ್ಲ ತೆನೆಗಳು 3 ರಿಂದ 4 ಅಡಿ ಬೆಳೆದು ನಿಂತಿವೆ. ಎರಡೂವರೆ ಎಕರೆಯಲ್ಲಿ ತೊಗರಿ ಜತೆಗೆ ಮಿಶ್ರ ಬೆಳೆಯನ್ನಾಗಿ ಸಜ್ಜೆ ಬೆಳೆದಿದ್ದಾರೆ.

ರಾಜಸ್ಥಾನ ಗೆಳೆಯನ ಮಾರ್ಗದರ್ಶನ: ಬೋರ್ ಹಾಕಿಸಿ ನೀರಾವರಿ ಮಾಡುವ ಸಾಮರ್ಥ್ಯ ಇಲ್ಲದ ಈ ರೈತನಿಗೆ ಏನು ಬೆಳೆದರೆ ಹೆಚ್ಚು ಆದಾಯ ಬರಬಹುದು ಎಂಬ ಚಿಂತೆಯಲ್ಲಿ ಮುಳುಗಿದ್ದರು. ಇಂಥ ಸಂದರ್ಭದಲ್ಲಿ ರಾಜಸ್ಥಾನದಲ್ಲಿನ ಸ್ನೇಹಿತ ಪನ್ನಾಲಾಲ್ ನೆರವಿಗೆ ಬಂದರು. ಪನ್ನಲಾಲ್ ಬೆಳೆದ ಸಜ್ಜೆ ಚಿತ್ರಗಳನ್ನು ನೋಡಿ ಮಾರುಹೋದರು.

ನಾಲ್ಕು ಪಟ್ಟು ಆದಾಯ: ತಕ್ಷಣ ರಾಜಸ್ಥಾನದಿಂದ ಟರ್ಕಿ ಮೂಲದ ಸಜ್ಜೆಯ ಬಿತ್ತನೆ ಬೀಜಗಳ ಖರೀದಿಗೆ 2,500 ರೂ. ಪಾವತಿಸಿ 1ಕೆಜಿ ಬಿತ್ತನೆ ಬೀಜ ತರಿಸಿಕೊಂಡರು ಈ ಬೀಜ ನಮ್ಮ ಭೂಮಿಯಲ್ಲಿ ಬೆಳೆಯುವುದೇ ಎಂಬ ಚಿಂತೆಯೊಂದಿಗೆ ಏನಾದರೂ ಆಗಲಿ ಈ ಪ್ರಯೋಗ ಮಾಡಿಯೇ ತೀರಬೇಕೆಂದು ಬಿತ್ತನೆ ಮಾಡಿದರು. ಜತೆಗೆ ತೊಗರಿಯನ್ನು ಮಿಶ್ರ ಬೆಳೆ ಮಾಡಿದರು. ಹೊಸ ಚಿಂತನೆ ಫಲಪ್ರದವಾಗಿದೆ. ಟರ್ಕಿ ಬಿತ್ತನೆ ಬೀಜದಿಂದ ಒಂದು ದಂಟಿನಲ್ಲಿ 8ರಿಂದ 10 ತೆನೆಗಳು ಬೃಹದಾಕಾರವಾಗಿ ಬೆಳೆದಿವೆ. ಅಲ್ಲದೇ ಹೆಚ್ಚು ಕಾಳು ಆಗುವುದರ ಜತೆಗೆ ಆದಾಯವೂ ನಾಲ್ಕು ಪಟ್ಟು ಹೆಚ್ಚುವಂತೆ ಮಾಡಿರುವುದು ಖುಷಿ ನೀಡಿದೆ.ದೇಶಿಯ ತಳಿಗಳ ಒಂದು ದಂಟಿನಲ್ಲಿ ಒಂದರಿಂದ ಎರಡು ತೆನೆಗಳು ಬೆಳೆಯುತ್ತವೆ. ಅವು ಕೂಡ ಅಷ್ಟೊಂದು ಎತ್ತರ ಹಾಗೂ ದಪ್ಪ ಇರುವುದಿಲ್ಲ. ಇದರಿಂದ ಉತ್ತಮ ಆದಾಯ ನಿರೀಕ್ಷಿಸಬಹುದು ಎಂದು ಇಳಕಲ್‌ನ ಅಗ್ನಿಶಾಮಕ ದಳದ ಅಧಿಕಾರಿ ಜಗದೀಶ ಗಿರಡ್ಡಿ ಹೇಳುತ್ತಾರೆ.



ಇಳಕಲ್ ಸಮೀಪದ ಹೇರೂರ ಗ್ರಾಮದ ಜಮೀನಿನಲ್ಲಿ ರಾಜಶೇಖರ ಬಸವರಾಜ ಹುಡೇದಮನಿ 1 ಎಕರೆಯಲ್ಲಿ ಬಿತ್ತಿದ ಟರ್ಕಿ ಮೂಲದ ಸಜ್ಜೆ ಬೃಹದಾಕಾರವಾಗಿ ಬೆಳೆದಿದೆ.

- ರಾಜಶೇಖರ ಹುಡೇದಮನಿ ಹೊಸ ಆಲೋಚನೆ ಹಾಗೂ ಪಟ್ಟ ಶ್ರಮ ಅಗಾಧ. ಹೆಚ್ಚಿನ ಇಳುವರಿಯಿಂದ ರೈತರಿಗೆ ವರದಾನವಾಗಲಿದೆ. ಎಕರೆಗೆ ಬಹುತೇಕ 20 ಕ್ವಿಂಟಾಲ್‌ನಷ್ಟು ಫಸಲು ಬರಬಹುದು.
- ಎಂ.ಆರ್. ಪಾಟೀಲ, ರೈತ ಮುಖಂಡ, ಇಳಕಲ್

- ಟರ್ಕಿ ಮೂಲದ ಸಜ್ಜೆ ಬೆಳೆಯು ಇಳುವರಿ ರೈತರಿಗೆ ಮಾದರಿಯಾಗಿದೆ. ಇಂತಹ ಬೀಜಗಳನ್ನು ರೈತರು ಬಯಸಿದರೆ ಅವರಿಗೆ ಪೂರೈಸುವ ಪ್ರಯತ್ನ ಮಾಡುತ್ತೇವೆ.
- ಎಂ.ಎಸ್. ವಾಲಿ, ಕೃಷಿ ಅಧಿಕಾರಿ, ಇಳಕಲ್

21-09-2022
Vijaya Karnataka p.16

ಆರ್ಟಿಕ್ ತೋಳದ ಮೊದಲ ತದ್ರೂಪಿ ಸೃಷ್ಟಿ

ನವದೆಹಲಿ: ವೀರ್ಯಾಣು ಮತ್ತು ಅಂಡಾಣುವನ್ನು ಕಸಿ ಮಾಡಿ, ಸಂತಾನವನ್ನು ಪ್ರಯೋಗಾಲಯದಲ್ಲಿ ಬೆಳೆಸುವ ಕ್ಲೋನಿಂಗ್ ತಂತ್ರಜ್ಞಾನ ಈಗ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಆ ತಂತ್ರಜ್ಞಾನದ ಫಲಶ್ರುತಿಯೆಂಬಂತೆ ಆರ್ಟಿಕ್ ತೋಳವೊಂದನ್ನು ಚೀನಾದ ಪ್ರಯೋಗಾಲಯದಲ್ಲಿ ಹುಟ್ಟಿಸಿ, ಬೆಳೆಸಲಾಗಿದೆ. ಅದರ ವಿಡಿಯೋ ಕೂಡ ಪ್ರಕಟವಾಗಿದೆ. ಹೀಗೆ ಹುಟ್ಟಿ ಬೆಳೆದ ವಿಶ್ವದ ಮೊದಲ ತೋಳ ಇದು ಎಂಬ ದಾಖಲೆಯೂ ನಿರ್ಮಾಣವಾಗಿದೆ.

ಪೂರ್ವ ಚೀನಾದ ಜಿಯಾಂಗ್ಸು ಪ್ರಾಂತ್ಯದ ಕ್ಷುಝೌ ನಲ್ಲಿರುವ ಸಿನೊಜೆನ್ ಬಯೋಟೆಕ್ನಾಲಜಿ ಕಂಪನಿ ಇಂಥ ಸಾಧನೆ ಮಾಡಿದೆ. ಆರ್ಟಿಕ್ ತೋಳದ ತದ್ರೂಪಿಗೆ 'ಮಾಯಾ' ಎಂದು ಹೆಸರನ್ನೂ ಇಡಲಾಗಿದೆ. ಅಳಿವಿನಂಚಿನಲ್ಲಿರುವ ಪ್ರಾಣಿಗಳನ್ನು ಈ ತಂತ್ರಜ್ಞಾನದ ಮೂಲಕ ಉಳಿಸಬಹುದು ಎಂಬ ವಿಶ್ವಾಸ ಈಗ ಹುಟ್ಟಿಕೊಂಡಿದೆ.

ಹುಟ್ಟಿಸಿದ್ದು ಹೇಗೆ? ಕಾರಣವೇನು?: ಆರ್ಟಿಕ್ ತೋಳಗಳ ಸಂತತಿ ಮರೆಯಾಗುವ ಹಂತಕ್ಕೆ ತಲುಪಿದೆ. ಅದನ್ನು ಜೀವಂತವಾಗುಳಿಸಲು ಚೀನಾ ವಿಜ್ಞಾನಿಗಳು ಈ ಕಷ್ಟಕರವಾದ ಸವಾಲು ತೆಗೆದುಕೊಂಡರು. ಈ ತೋಳವನ್ನು ಹುಟ್ಟಿಸಲು ಬೇಕಾದ ಜೀವಕೋಶವನ್ನು ಕೆನಡಾದಲ್ಲಿನ ಹೆಣ್ಣು ಆರ್ಟಿಕ್ ತೋಳವೊಂದರಿಂದ ತೆಗೆದು ಕೊಳ್ಳಲಾಗಿದೆ. ಇದಕ್ಕೆ ಬೇಕಾದ ಅಂಡಾಣುವನ್ನು ಒಂದು ಹೆಣ್ಣುನಾಯಿಯಿಂದ ಪಡೆಯಲಾಗಿದೆ. ಬೀಗಲ್ ತಳಿಯ ನಾಯಿಯ ಗರ್ಭದಲ್ಲಿಟ್ಟು ತೋಳವನ್ನು ಬೆಳೆಸಲಾಗಿದೆ. ಒಟ್ಟಾರೆ 2 ವರ್ಷಗಳ ತೀವ್ರ ಹಣಗಾಟದ ನಂತರ ವಿಜ್ಞಾನಿಗಳ ಸಾಹಸಕ್ಕೆ ಯಶಸ್ಸು ಸಿಕ್ಕಿದೆ.

ನಾಯಿಗಳು ಮೂಲತಃ ತೋಳಗಳ ಜಾತಿಗೆ ಸೇರಿವೆ. ಒಂದು ಕಾಲದಲ್ಲಿ ತೋಳಗಳಾಗಿದ್ದ ಪ್ರಾಣಿಗಳೇ ಈಗ ನಾಯಿಗಳಾಗಿ ಬದಲಾಗಿವೆ ಎನ್ನುವುದು ಸ್ಪಷ್ಟ ಹೀಗಾಗಿ ಕ್ಲೋನಿಂಗ್ ತೋಳವನ್ನು ಹುಟ್ಟಿಸಲು ಹೆಣ್ಣು ನಾಯಿಯನ್ನು ಬಳಸಲಾಗಿದೆ.



- ಕ್ಲೋನಿಂಗ್ ಮೂಲಕ ಹುಟ್ಟಿದ 'ಮಾಯಾ'
- ನಾಯಿಯೇ ಈ ತೋಳದ ಬಾಡಿಗೆ ತಾಯಿ
- ಸಿನೊಜೆನ್ ಬಯೋಟೆಕ್ನಾಲಜಿಯಲ್ಲಿ 2 ವರ್ಷದ ಹೆಣಗಾಟದ ನಂತರ ವಿಜ್ಞಾನಿಗಳಿಗೆ ಯಶಸ್ಸು

21-09-2022
Udayavani p.10

ಬುಧವಾರ, 21

ಕೃಷಿ ವಲಯದಲ್ಲಿ ರಸಗೊಬ್ಬರ ಬಳಕೆ ಹೆಚ್ಚಾಗಿರುವ ಪರಿಣಾಮ ರಾಜ್ಯಗಳಿಂದ ವ್ಯಕ್ತವಾಗುತ್ತಿರುವ ಬೇಡಿಕೆ ತಗ್ಗಿಸಲು ಕೇಂದ್ರ ಸರ್ಕಾರ ಪಿಎಂ ಪ್ರಣಾಮ್ (ಪ್ರಮೋಷನ್ ಆಫ್ ಆಲ್ಟರ್ನೇಟಿವ್ ನ್ಯೂಟ್ರಿಯಂಟ್ಸ್ ಫಾರ್ ಅಗ್ರಿಕ್ಚರ್ ಮ್ಯಾನೇಜ್‌ಮೆಂಟ್) ಎಂಬ ಹೊಸ ಯೋಜನೆ ಜಾರಿಗೆ ತರಲು ಚಿಂತನೆ ನಡೆಸಿದೆ. ಪ್ರಸ್ತಾವಿತ ಯೋಜನೆಯು ರಸಗೊಬ್ಬರದ ಮೇಲಿನ ಸಬ್ಸಿಡಿ ಹೊರೆ ಇಳಿಸುವ ಉದ್ದೇಶ ಸಹ ಹೊಂದಿದೆ. ಹಾಗಾದರೆ, ಏನಿದು ಯೋಜನೆ? ಇದನ್ನೀಗ ಪರಿಚಯಿಸುತ್ತಿರುವುದೇಕೆ? ದೇಶಕ್ಕೆ ಎಷ್ಟು ರಸಗೊಬ್ಬರದ ಅಗತ್ಯವಿದೆ ಇತ್ಯಾದಿ ಮಾಹಿತಿ ಇಲ್ಲಿದೆ.

ಹೊರೆ ಇಳಿಸಲಿದೆಯೇ ಪಿಎಂ ಪ್ರಣಾಮ್?

ಯೋಜನೆ ಪರಿಚಯಿಸುತ್ತಿರುವುದೇಕೆ?

ಕಳೆದ 5 ವರ್ಷಗಳಿಂದ ದೇಶದಲ್ಲಿ ರಸಗೊಬ್ಬರಕ್ಕೆ ಹೆಚ್ಚಿದ ಬೇಡಿಕೆಯಿಂದಾಗಿ, ಸಬ್ಸಿಡಿ ಮೇಲಿನ ಸರ್ಕಾರದ ಒಟ್ಟಾರೆ ವೆಚ್ಚವೂ ಹೆಚ್ಚಾಗಿದೆ. ಅದರಲ್ಲಿಯೂ 4 ರಸಗೊಬ್ಬರಗಳ ಒಟ್ಟು ಅವಶ್ಯಕತೆ ಯೂರಿಯಾ, ಡಿಎಪಿ (ಡೈ-ಅಮೋನಿಯಂ ಫಾಸ್ಫೇಟ್), ಎಂಒಪಿ (ಮ್ಯೂರಿಯೇಟ್ ಆಫ್ ಪೊಟ್ಯಾಷ್), ಎನ್‌ಪಿಕೆಎಸ್ (ನೈಟ್ರೋಜನ್, ರಂಜಕ ಮತ್ತು ಪೊಟ್ಯಾಷಿಯಮ್) - 2017-2018 ಮತ್ತು 2021-2022 ರ ನಡುವೆ 528.86 ಲಕ್ಷ ಮೆಟ್ರಿಕ್ ಟನ್‌ನಿಂದ (ಎಲ್‌ಎಂಟಿ) 640.27 ಎಲ್‌ಎಂಟಿಗೆ ಏರಿಕೆಯಾಗುವು ದರೊಂದಿಗೆ ಈ ಪ್ರಮಾಣ ಶೇ. 21ರಷ್ಟು ಹೆಚ್ಚಾಗಿದೆ. ಕೇಂದ್ರ, ರಾಸಾಯನಿಕ ಮತ್ತು ರಸಗೊಬ್ಬರಗಳ ರಾಜ್ಯ ಸಚಿವ ಭಗವಂತ ಖೂಬಾ ಲೋಕಸಭೆಗೆ ನೀಡಿದ ಲಿಖಿತ ಉತ್ತರದ ಪ್ರಕಾರ, ದೇಶದಲ್ಲಿ ರಸಗೊಬ್ಬರಗಳಿಗೆ ಹೆಚ್ಚಿದ ಬೇಡಿಕೆ ಹಿನ್ನೆಲೆ ಸರ್ಕಾರ ರಾಸಾಯನಿಕ ಗೊಬ್ಬರಗಳಿಗೆ ನೀಡುವ ಸಬ್ಸಿಡಿಯನ್ನು ಸಹ ಹೆಚ್ಚಿಸುತ್ತಿದೆ. 2021-22 ರ ಕೇಂದ್ರ ಬಜೆಟ್‌ನಲ್ಲಿ ಸರ್ಕಾರವು 79,530 ಕೋಟಿ ರೂ.ಗಳ ಮೊತ್ತದ ಬಜೆಟ್ ಮಾಡಿತ್ತು. ಬಳಿಕ ಪರಿಷ್ಕೃತ ಅಂದಾಜಿನಲ್ಲಿ (ಆರ್‌ಇ) 1.40 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಆದಾಗ್ಯೂ, 2021-22ರಲ್ಲಿ ರಸಗೊಬ್ಬರ ಸಬ್ಸಿಡಿಯ ಅಂತಿಮ ಅಂಕಿ-ಅಂಶವು 1.62 ಲಕ್ಷ ಕೋಟಿ ರೂ.ಗಳಷ್ಟಾಗಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ (2022-23), ಸರ್ಕಾರ 1.05 ಲಕ್ಷ ಕೋಟಿ ರೂ.ಗಳನ್ನು ನಿಗದಿಪಡಿಸಿದೆ. ಆದರೆ ರಸಗೊಬ್ಬರ ಸಚಿವರು ಈ ವರ್ಷದಲ್ಲಿ ರಸಗೊಬ್ಬರ ಸಬ್ಸಿಡಿ 2.25 ಲಕ್ಷ ಕೋಟಿ ರೂ.ಗಳನ್ನು ದಾಟಬಹುದು ಎಂದು ಹೇಳಿದ್ದಾರೆ.



ಯಾವಾಗ ಜಾರಿಯಾಗಲಿದೆ?

ಸೆ.7ರಂದು ನಡೆದ ರಬಿ ಅಭಿಯಾನದ ರಾಷ್ಟ್ರೀಯ ಕೃಷಿ ಸಮ್ಮೇಳನದಲ್ಲಿ ಪಿಎಂ ಪ್ರಣಾಮ್ ಯೋಜನೆ ಬಗ್ಗೆ ರಾಜ್ಯಗಳ ಕೃಷಿ ಅಧಿಕಾರಿಗಳೊಂದಿಗೆ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಉನ್ನತ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ. ಅದರಂತೆ, ಯೋಜನೆ ವೈಶಿಷ್ಟ್ಯಗಳ ಬಗ್ಗೆ ಸಚಿವಾಲಯ ರಾಜ್ಯಗಳ ಸಲಹೆಗಳನ್ನು ಕೇಳಿದೆ. ಅಲ್ಲದೆ, ಉದ್ದೇಶಿತ ಯೋಜನೆಯ ಕುರಿತು ಸಚಿವಾಲಯ ಅಂತರ-ಸಚಿವಾಲಯಗಳೊಂದಿಗೆ ಚರ್ಚೆಗಳನ್ನು ಸಹ ಆರಂಭಿಸಿದೆ. ಆ ಪ್ರಕಾರ, ಈ ಬಗ್ಗೆ ಇಲಾಖೆಗಳ ಅಭಿಪ್ರಾಯಗಳನ್ನು ಪಡೆದ ಬಳಿಕ ಅದರ ಕರಡು ಪೂರ್ಣಗೊಳ್ಳುತ್ತದೆ. ಆ ನಂತರವಷ್ಟೇ ಸಾಧಕ-ಬಾಧಕಗಳನ್ನು ಗಮನಿಸಿ ಯೋಜನೆ ಜಾರಿಗೊಳಿಸಲಾಗುತ್ತದೆ.



ಏನಿದು ಯೋಜನೆ?

ಯೋಜನೆ ಪ್ರತ್ಯೇಕ ಬಜೆಟ್ ಎನ್ನುವುದಿರದು. ಬದಲಿಗೆ ಇದಕ್ಕೆ ರಸಗೊಬ್ಬರ ಇಲಾಖೆಯಲ್ಲಿ ಪಸಕ್ತ ಆಸ್ತಿತ್ವದಲ್ಲಿರುವ ರಸಗೊಬ್ಬರ ಸಬ್ಸಿಡಿಯ ಉಳಿತಾಯಗಳೊಂದಿಗೆ ಹಣಕಾಸು ಒದಗಿಸಲಾಗುತ್ತದೆ. ಜತೆಗೆ ಶೇ. 50 ಸಬ್ಸಿಡಿ ಉಳಿತಾಯ ಹಣವನ್ನು, ರಸಗೊಬ್ಬರ ಸಬ್ಸಿಡಿ ಉಳಿಸುವ ರಾಜ್ಯಕ್ಕೆ ಅನುದಾನವಾಗಿ ನೀಡಲಾಗುತ್ತದೆ. ಆ ಪ್ರಕಾರ ಯೋಜನೆಯಲ್ಲಿ ಒದಗಿಸಲಾದ ಶೇ. 70 ಅನುದಾನವನ್ನು ರಸಗೊಬ್ಬರಗಳ ತಾಂತ್ರಿಕ ಅಳವಡಿಕೆಗೆ ಸಂಬಂಧಿಸಿದ ಆಸ್ತಿ ರಚನೆಗೆ ಬಳಸಬಹುದು. ಅದೇ ರೀತಿ ಗ್ರಾಮ, ಬ್ಲಾಕ್ ಮತ್ತು ಜಿಲ್ಲಾ ಮಟ್ಟಗಳಲ್ಲಿ ಪರ್ಯಾಯ ರಸಗೊಬ್ಬರ ಉತ್ಪಾದನಾ ಘಟಕಗಳಿಗಾಗಿ ಬಳಸಬಹುದಾಗಿದೆ. ಉಳಿದ ಶೇ.30 ಅನುದಾನ ಹಣವನ್ನು ರಸಗೊಬ್ಬರ ಬಳಕೆ ಇಳಿಸುವತ್ತ ಕಾರ್ಯಗತವಾಗಿರುವ ಹಾಗೂ ಅರಿವು ಮೂಡಿಸುತ್ತಿರುವ ರೈತರು, ಪಂಚಾಯಿತಿಗಳು, ರೈತ ಉತ್ಪಾದಕ ಸಂಘಟನೆಗಳು ಮತ್ತು ಸ್ವ-ಸಹಾಯ ಗುಂಪುಗಳನ್ನು ಉತ್ತೇಜಿಸಲು ಬಳಸಬಹುದು. ಕಳೆದ 3 ವರ್ಷಗಳಲ್ಲಿ ಯೂರಿಯಾ ಬಳಕೆಯನ್ನು ಗಮನಿಸಲಾಗುತ್ತದೆ. ಅದರಂತೆ, ರಾಜ್ಯ ವರ್ಷದಲ್ಲಿ ಯೂರಿಯಾ ಬಳಕೆಯಲ್ಲಿ ಹೆಚ್ಚಳ ಅಥವಾ ಕಡಿಮೆಯಾಗಿರುವ ಬಗ್ಗೆ ಕೇಂದ್ರ ಹೋಲಿಕೆ ಮಾಡಲಿದೆ. ಇದಕ್ಕಾಗಿ ರಸಗೊಬ್ಬರ ಸಚಿವಾಲಯದ ಡ್ಯಾಶ್ ಬೋರ್ಡ್ ಐಎಫ್‌ಎಂಎಸ್‌ನಲ್ಲಿ (ಇಂಟಿಗ್ರೇಟೆಡ್ ಫರ್ಟಿಲೈಸರ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ) ಲಭ್ಯವಿರುವ ದತ್ತಾಂಶ ಉಪಯೋಗಿಸಲಾಗುತ್ತದೆ.

ಭಾರತಕ್ಕೆ ಎಷ್ಟು ರಸಗೊಬ್ಬರದ ಅಗತ್ಯವಿದೆ?

ಭಾರತದ ಆಹಾರ ಭದ್ರತೆಯಲ್ಲಿ ಜೂನ್-ಅಕ್ಟೋಬರ್‌ವರೆಗಿನ ಮುಂಗಾರು ಕೃಷಿ (ಖಾರಿಫ್ ಋತು) ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ವೇಳೆಯಲ್ಲಿನ ಕೃಷಿಯಿಂದಲೇ ಅರ್ಧ ವರ್ಷದ ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗುತ್ತದೆ. ಇದರಲ್ಲಿ ಒಂದೇ ಮೂರು ದ್ವಿದಳ ಧಾನ್ಯಗಳು, ಎರಡನೇ ಮೂರು ಎಣ್ಣೆಕಾಳುಗಳಾಗಿವೆ. ಹೀಗಾಗಿ ಈ ಋತುವಿಗಾಗಿ ದೊಡ್ಡ ಮಟ್ಟದ ರಸಗೊಬ್ಬರ ಅಗತ್ಯವಿದೆ. ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ಪ್ರತಿ ವರ್ಷ ಬೆಳೆ ಹಂಗಾಮಿನ ಆರಂಭಕ್ಕೂ ಮೊದಲು ರಸಗೊಬ್ಬರದ ಅಗತ್ಯ ನಿರ್ಣಯಿಸುತ್ತವೆ. ಬಳಿಕ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವಾಲಯಕ್ಕೆ ರಸಗೊಬ್ಬರದ ಅಗತ್ಯತೆ ಕುರಿತು ಮಾಹಿತಿ ನೀಡಲಾಗುತ್ತದೆ.

ದೇಶದಲ್ಲಿ ಪ್ರಸಕ್ತ 2022-23ರಲ್ಲಿ ರಸಗೊಬ್ಬರಕ್ಕಾಗಿ ವೆಚ್ಚ 2.25 ಲಕ್ಷ ಕೋಟಿ ರೂ.ಗೆ ಏರಿಕೆಯಾಗುವುದೆಂದು ನಿರೀಕ್ಷಿಸಲಾಗಿದೆ. ಅಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ರಸಗೊಬ್ಬರಕ್ಕಾಗಿ 1.62 ಲಕ್ಷ ಕೋಟಿ ರೂ.ಗಳ ಹೆಚ್ಚಳದೊಂದಿಗೆ ಶೇ. 39ರಷ್ಟು ವೆಚ್ಚ ಹೆಚ್ಚಾಗುವುದು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ಯೋಜನೆಯು ರಸಗೊಬ್ಬರ ಮೇಲಿನ ಸಬ್ಸಿಡಿ ಒತ್ತಡವನ್ನು ಇಳಿಸುವ ಉದ್ದೇಶ ಹೊಂದಿದ್ದು ಸಾಕಷ್ಟು ಸಹಕಾರಿ ಯಾಗಲಿದೆ.





21-09-2022
Hosa Digantha
p.05

ಆಹಾರ ಧಾನ್ಯ ಹಗೇವು ಭರ್ತಿಗೆ ಸಂಕಲ್ಪ

ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿಗೆ ಕೇಂದ್ರ ಸರಕಾರ 164.8 ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಗುರಿ ನಿಗದಿ ಮಾಡಿದೆ. ಈ ಪೈಕಿ ಗೋದಿ 112, ಕಡಲೆ 13.5 ಹಾಗೂ ಅಕ್ಕಿ 18.5 ದಶಲಕ್ಷ ಟನ್ ಉತ್ಪಾದನಾ ಗುರಿ ಹೊಂದಲಾಗಿದೆ.

ಈ ಅವಧಿಗೆ 14.45 ದಶಲಕ್ಷ ಟನ್ ಎಣ್ಣೆಬೀಜ ಉತ್ಪಾದನೆ ಗುರಿ ಇದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಾಗಿದ್ದ 13.80 ದಶಲಕ್ಷ ಟನ್‌ಗಿಂತ ಅಧಿಕವಾಗಿದೆ. ಪ್ರಸಕ್ತ 2022-23ನೇ ಸಾಲಿಗೆ ಒಟ್ಟು 328 ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನಾ ಗುರಿ ಹೊಂದಲಾಗಿದೆ. ಹಿಂಗಾರು ಹಂಗಾಮಿನ ಉತ್ಪಾದನಾ ಗುರಿ ಸಾಧಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಿಶ್ರ ಬೆಳೆ, ಬೆಳೆ ವೈವಿಧ್ಯತೆ ಮೂಲಕ ಮುಖ್ಯ ಬೆಳೆ ಕ್ಷೇತ್ರದ ವಿಸ್ತರಣೆ, ಅಧಿಕ ಇಳುವರಿ ನೀಡುವ ತಳಿಗಳ ಬಳಕೆ, ಕಡಿಮೆ ಇಳುವರಿ ಬರುವ ಪ್ರದೇಶಗಳಲ್ಲಿ ಸೂಕ್ತ ವೈಜ್ಞಾನಿಕ ಕೃಷಿ ಪದ್ಧತಿಯ ಅಳವಡಿಕೆ, ತೇವಾಂಶದ ಸಮರ್ಪಕ ಬಳಕೆ, ಸಕಾಲದಲ್ಲಿ ಬಿತ್ತನೆ ಹಾಗೂ ವೈಜ್ಞಾನಿಕ ನೀರಾವರಿ ಪದ್ಧತಿ ಮುಂತಾದ ಕ್ರಮಗಳ ಮೂಲಕ ಹಿಂಗಾರು ಉತ್ಪಾದನೆ ಹೆಚ್ಚಿಸಲಾಗುವದೆಂದು ಕೃಷಿ ಸಚಿವಾಲಯವು ತಿಳಿಸಿದೆ.

ಸುಧಾರಿತ ಅಂದಾಜಿನ ಪ್ರಕಾರ 2021-22ನೇ ಸಾಲಿಗೆ 315.7 ದಶಲಕ್ಷ ಟನ್ ಆಹಾರಧಾನ್ಯ ಉತ್ಪಾದನೆಯಾಗುವದೆಂದು ಹೇಳಲಾಗಿದೆ. ಇದು ಕಳೆದ ವರ್ಷದಲ್ಲಾಗಿದ್ದಕ್ಕಿಂತ 5 ದಶಲಕ್ಷ ಟನ್‌ದಷ್ಟು ಹೆಚ್ಚಾಗಿದೆ. ಈ ಅವಧಿಯಲ್ಲಿ ಬೇಳೆಕಾಳು, ಎಣ್ಣೆಬೀಜಗಳ ಉತ್ಪಾದನೆ ಅನುಕ್ರಮವಾಗಿ 27.7 ದಶಲಕ್ಷ ಟನ್ ಮತ್ತು 37.7 ದಶಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದೆ. ಬೆಳೆ ಹಾನಿಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ ರೈತರಿಗೆ 1.22 ಲಕ್ಷ ಕೋಟಿ ರೂ ಪರಿಹಾರ ನೀಡಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.



ಸಾಸಿವೆ ಮಿಷನ್

ಸಾಸಿವೆ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರಕಾರ ಸಾಸಿವೆ ಮಿಷನ್ ಯೋಜನೆ ಹಮ್ಮಿಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಸಾಸಿವೆ ಉತ್ಪಾದನೆ 91.24 ದಶಲಕ್ಷ ಟನ್‌ದಿಂದ 117.46 ಲಕ್ಷ ಟನ್‌ಗೆ ಏರಿಕೆಯಾಗಿದ್ದು, ಶೇ.29ರಷ್ಟು ಹೆಚ್ಚಳವಾಗಿದೆ. 2021-22ರಲ್ಲಿ ಸಾಸಿವೆ ಬೆಳೆ ಕ್ಷೇತ್ರ 80.58 ಲಕ್ಷ ಹೆಕ್ಟೇರ್‌ಗೆ ಏರಿದೆ. ಇದೇ ರೀತಿಯಲ್ಲಿ ಈಗ ವಿಶೇಷವಾಗಿ ಸೋಯಾಬೀನ್ ಹಾಗೂ ಸೂರ್ಯಕಾಂತಿ ಮಿಷನ್ ಅನುಷ್ಠಾನಗೊಳಿಸಲು ಚಿಂತನೆ ನಡೆಸಲಾಗಿದೆ ಎಂದು ತೋಮರ್ ತಿಳಿಸಿದ್ದಾರೆ.

ಶೇಂಗಾ ಬೆಳೆಗೆ ಹವಾಮಾನ ವೈಪರೀತ್ಯದ ಬಾಧೆ

ಹವಾಮಾನ ವೈಪರೀತ್ಯ, ರೋಗ ಬಾಧೆ ಹಿನ್ನೆಲೆಯಲ್ಲಿ ಈ ಬಾರಿ ಶೇಂಗಾ ಬೆಳೆ ಇಳುವರಿಯ ಮೇಲೆ ಪರಿಣಾಮ ಬೀರಲಿದ್ದು, ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ದೃಢವಾಗಿ ಇರುವದೆಂದು ಹೇಳಲಾಗಿದೆ.

ಶೇಂಗಾ ಧಾರಣಿ ಸದ್ಯಕ್ಕೆ ಕ್ವಿಂಟಲ್‌ಗೆ ಕನಿಷ್ಠ ಬೆಂಬಲ ಬೆಲೆ 5,850 ರೂಗಿಂತ ಹೆಚ್ಚಾಗಿದ್ದು, ಗರಿಷ್ಠ 6000 ರೂ ಶ್ರೇಣಿಯಲ್ಲಿ ಮಾರಾಟವಾಗುತ್ತಿದೆ. ಶೇಂಗಾ ಬೆಳೆಯ ದೊಡ್ಡ ಉತ್ಪಾದಕ ಗುಜರಾತ್ ರಾಜ್ಯದಲ್ಲಿ ಬೆಳೆ ಕ್ಷೇತ್ರದ ಇಳಿಕೆ, ರೋಗಬಾಧೆ, ಹವಾಮಾನ ವೈಪರೀತ್ಯ ಪರಿಸ್ಥಿತಿಯು ಈ ಬಾರಿ ವ್ಯತಿರಿಕ್ತ ಪರಿಣಾಮ ಬೀರಿದೆ. ಇದರ ಪರಿಣಾಮದ ಜೊತೆಗೆ ಹಬ್ಬದ ಹಂಗಾಮಿನ ಬೇಡಿಕೆಯೂ ಇರುವದರಿಂದ ಶೇಂಗಾ ಎಣ್ಣೆ ಬೆಲೆ ದೃಢವಾಗಿಯೇ ಮುಂದುವರಿದಿದೆ. ಪಾಮೆಣ್ಣೆ, ಸೋಯಾ ಎಣ್ಣೆ ಬೆಲೆ ಇತ್ತೀಚೆಗೆ ಕಡಿಮೆಯಾಗಿರುವದು ಸಹ ಶೇಂಗಾ ಎಣ್ಣೆ ಧಾರಣಿ ಮೇಲೆ ಪರಿಣಾಮ ಬೀರಿಲ್ಲವೆಂದು ವಾಣಿಜ್ಯ ಮೂಲಗಳು ತಿಳಿಸಿವೆ.

ಗುಜರಾತ್‌ನಲ್ಲಿ ಈ ಬಾರಿ 17.08 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆಯಾಗಿದೆ. ಕಳೆದ ವರ್ಷದಲ್ಲಾಗಿದ್ದ 19.09 ಲಕ್ಷ ಹೆಕ್ಟೇರ್‌ಗೆ ಹೋಲಿಸಿದರೆ ಸುಮಾರು ಶೇ.10ರಷ್ಟು ಕಡಿಮೆಯಾಗಿದೆ. 2022-23ನೇ ಸಾಲಿನಲ್ಲಿ ಈ ರಾಜ್ಯದಲ್ಲಿ ಶೇಂಗಾ ಉತ್ಪಾದನೆ 39.17 ಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದ್ದು, ಕಳೆದ ವರ್ಷದಲ್ಲಾಗಿದ್ದ 43.59 ಲಕ್ಷ ಟನ್‌ಗಿಂತ ಕಡಿಮೆಯಾಗಲಿದೆ. ಇನ್ನು ರಾಷ್ಟ್ರೀಯ ಮಟ್ಟದಲ್ಲಿ ಬಿತ್ತನೆ ಕ್ಷೇತ್ರವು 44.75 ಲಕ್ಷ ಹೆಕ್ಟೇರ್‌ದಷ್ಟಾಗಿದೆ. ಕಳೆದ ವರ್ಷ ಇದು 48.35 ಲಕ್ಷ ಹೆಕ್ಟೇರ್‌ದಷ್ಟಿತ್ತು. ಇತ್ತೀಚೆಗಿನ ಅಂಕಿ ಅಂಶ ವರದಿಯ ಪ್ರಕಾರ ಕರ್ನಾಟಕದಲ್ಲಿ 3.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಪ್ರಮುಖ ಗ್ರಾಹಕ ದೇಶ ಚೀನಾದಲ್ಲಿ ಈ ವರ್ಷ ಬರಗಾಲ ಇರುವದರಿಂದ ಭಾರತದಿಂದಲೇ ಶೇಂಗಾ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ಬೇರೆ ಉತ್ಪಾದಕ ದೇಶಗಳಾದ ಸುಡಾನ್, ಸೆನೆಗಲ್‌ಗಳಲ್ಲಿ ಬೆಳೆ ಆವಕ ತಡವಾಗಿ ಬರುವದರಿಂದ ಸದ್ಯಕ್ಕೆ ಶೇಂಗಾ ಬೆಲೆ [illegible]ವಾಗಿ ಮುಂದುವರಿಯಲಿದೆ ಎಂದು [illegible] ತಿಳಿಸಿವೆ.



21-09-2022
Samyuktha Kar. p.09

ಕೋಳಿ ಗೊಬ್ಬರದ ಮಹಿಮೆ ಮಣ್ಣಿನ ಫಲವತ್ತತೆ ಹಿರಿಮೆ



ಕೋಳಿ ಗೊಬ್ಬರಗಳ ಆನಿಯಮಿತ ಬಳಕೆಯಿಂದ ಮಣ್ಣಿನ ಆರೋಗ್ಯ ಹಾಳಾಗುತ್ತದೆ ಎಂಬುದನ್ನು ನಿರಂತರ ಹಲವಾರು ರೈತರು ಸಾವಯವ ಗೊಬ್ಬರಗಳಿಗೆ ಮೊರೆ ಹೋಗುತ್ತಿದ್ದಾರೆ. ಕೊಟ್ಟಿಗೆ ಗೊಬ್ಬರ, ಕುರಿ/ಆಡಿನ ಗೊಬ್ಬರ, ಕೋಳಿ ಗೊಬ್ಬರ, ಹಂದಿಯ ಗೊಬ್ಬರ, ಎರೆಹುಳು ಗೊಬ್ಬರ, ಜೈವಿಕ ಕಾರಕ ಘಟಕ ಇತ್ಯಾದಿಗಳನ್ನು ಬಳಸಿ ಮಣ್ಣಿನಲ್ಲಿ ಪೋಷಕಾಂಶಗಳು ಹಾಗೂ ಜೀವಾಣುಗಳನ್ನು ಹೆಚ್ಚಿಸಬಹುದಾಗಿದೆ.

ದೇಶದಲ್ಲಿ ಕೋಳಿ ಸಾಕಾಣಿಗೆ ಈಗ ಬೃಹತ್ ಉದ್ಯಮ ಸ್ವರೂಪ ತಾಳಿದೆ. ಸಾಮಾನ್ಯವಾಗಿ ಕೋಳಿಗಳಲ್ಲಿ ಮಲ ಮತ್ತು ಮೂತ್ರಗಳೆರಡು ಬೆರೆತು ಹೊರಬರುವುದರಿಂದ ಇತರೆ ಪ್ರಾಣಿಗಳ ಮಲ ಹಾಗೂ ಮೂತ್ರಗಳಿಗಿಂತ ಉತ್ತಮ ಗುಣಮಟ್ಟದ ಪರಿಣಾಮಕಾರಿಯಾದ ಗೊಬ್ಬರವಾಗಿರುತ್ತದೆ. ಕೋಳಿ ಗೊಬ್ಬರದಲ್ಲಿ ಇತರ ಪ್ರಾಣಿಗಳ ಗೊಬ್ಬರಗಳಿಗಿಂತ ಪೌಷ್ಟಿಕ ಪ್ರಮಾಣದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷಿಯಮ್‌ನಂತಹ ಪ್ರಧಾನ ಪೋಷಕಾಂಶಗಳು ಲಭ್ಯವಿರುತ್ತದೆ. ಇವುಗಳೊಂದಿಗೆ ಲಘು ಪೋಷಕಾಂಶಗಳಾದ ಕಬ್ಬಣ, ಮ್ಯಾಂಗನೀಸ್, ಕಾಪರ್, ಕೋಬಾಲ್ಟ್, ಮ್ಯಾಲಿಬ್ಡನಮ್ ಸೇರಿದಂತೆ ಹಲವಾರು ಖನಿಜಗಳಿವೆ.

ಕೋಳಿಗೊಬ್ಬರವನ್ನು ನೇರವಾಗಿ ಬಿಸಿಲಲ್ಲಿ ಶೇಖರಿಸಿದರೆ ಬಿಸಿಲಿನ ಪ್ರಖರತೆಯಿಂದಾಗಿ ಪೋಷಕಾಂಶಗಳು ನಾಶವಾಗಿ ಮೌಲ್ಯ ಕಡಿಮೆಯಾಗುತ್ತದೆ ಎಂಬುದು ಸ್ಪಷ್ಟ ಅಭಿಪ್ರಾಯವಾಗಿದೆ. ವ್ಯವಸ್ಥಿತವಾಗಿ ನೆರಳಲ್ಲಿ ತಂಪಾದ ಸ್ಥಳದಲ್ಲಿ ಹಾಗೂ ಗುಂಡಿಗಳಲ್ಲಿ ಶೇಖರಿಸಿಡುವುದರಿಂದ ಮೌಲ್ಯವನ್ನು ವೃದ್ಧಿಸಬಹುದು.

ಸೂಪರ್ ಫಾಸ್ಫೇಟ್ ಮತ್ತು ಸುಣ್ಣದ ಅಂಶವನ್ನು ಸೂಕ್ತ ಪ್ರಮಾಣದಲ್ಲಿ ಬೆರೆಸಿದರೆ ಕೋಳಿಹಿಕ್ಕೆಯ ಗೊಬ್ಬರದ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಬಹುದು. ಕೋಳಿಹಿಕ್ಕೆ ಗೊಬ್ಬರದಲ್ಲಿರುವ ಸೋಡಿಯಮ್ ಮತ್ತು ಮೆಗ್ನೇಶಿಯಮ್ ಅಂಶವು ಭೂಮಿಯೊಳಗೆ ರಂಧ್ರಗಳನ್ನು ಹೆಚ್ಚಿಸುವುದರಿಂದ ಮಣ್ಣಿನಲ್ಲಿ ನೀರು ಒಡಿದಿಡುವ ಶಕ್ತಿಯು ಹೆಚ್ಚಳವಾಗುತ್ತದೆ. ಮಣ್ಣಿನಸವಕಳಿಯನ್ನು ತಡೆಯುತ್ತದೆ. ಭೂಮಿಯಲ್ಲಿ ಸೂಕ್ಷ್ಮಾಣುಜೀವಿಗಳ ಸಂಖ್ಯೆಯನ್ನು ಕೂಡಾ ಹೆಚ್ಚಿಸುತ್ತದೆ. ಶೇಖರಿಸಿಟ್ಟ ಒಂದು ಟನ್ ದಷ್ಟ ಸತ್ತೆಯ ಗೊಬ್ಬರವು ಸುಮಾರು 160 ಕಿ.ಗ್ರಾಂ ಅಮೋನಿಯಮ್ ಸಲ್ಫೇಟ್, 150 ಕಿ.ಗ್ರಾಂ ಸೂಪರ್ ಫಾಸ್ಫೇಟ್, 50 ಕಿ.ಗ್ರಾಂ ಪೊಟ್ಯಾಶಿಯಮ್ ಸಲ್ಫೇಟ್, 30 ಕಿ.ಗ್ರಾಂ ಸುಣ್ಣ, 7 ಕಿ.ಗ್ರಾಂ ಮೆಗ್ನೇಶಿಯಮ್, ಮತ್ತು 7 ಕಿ.ಗ್ರಾಮ್ ಸೋಡಿಯಮ್‌ಗೆ ಸರಿಸಮನಾಗಿರುತ್ತದೆ ಎಂದು ತಿಳಿದು ಬಂದಿದೆ. ಹೊಲದಲ್ಲಿ ಕೋಳಿ ಗೊಬ್ಬರವನ್ನು ಬಳಸಿದಾಗ ಮೊದಲನೆಯ ವರ್ಷದಲ್ಲಿ ಸುಮಾರು 1:2 ರಿಂದ 2:3 ಭಾಗದಲ್ಲಿ ಉಪಯೋಗವಾಗಿ ಉಳಿದದ್ದು ಮುಂದಿನ ವರ್ಷ ಉಪಯೋಗಿಸಲ್ಪಡುತ್ತದೆ. ಯಾವುದೇ ಸಾವಯವ ಗೊಬ್ಬರವು ರಾಸಾಯನಿಕ ಗೊಬ್ಬರಗಳಂತೆ ಬಳಸಿದ ತಕ್ಷಣ ತನ್ನ ಪ್ರಭಾವ ತೋರಿಸುವುದಿಲ್ಲ.

ಬೆಳೆಗಳಿಗೆ ಪರಿಣಾಮಕಾರಿ

4000 ಕಿ.ಗ್ರಾಮ್ ದಷ್ಟ ಸತ್ತೆಯ ಕೋಳಿಯ ಗೊಬ್ಬರದಲ್ಲಿ (ನೆಲದ ಮೇಲೆ ಸಾಕಾಣಿಕೆ ಮಾಡಿದ ಕೋಳಿ ಗೊಬ್ಬರ) 300 ಕಿ.ಗ್ರಾಮ್ ಸೂಪರ ಫಾಸ್ಫೇಟ್ ಮತ್ತು 110 ಕಿ.ಗ್ರಾಮ್ ಮ್ಯೂರಿಟ್ ಆಫ್ ಪೊಟ್ಯಾಷ್ ಪ್ರಮಾಣವನ್ನು ಸೇರಿಸಿದರೆ 4:10:10 ಗೊಬ್ಬರವಾಗುತ್ತದೆ. ಎಲ್ಲಾ ಬೆಳೆಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತದೆ. ಸಂಶೋಧನೆಯ ಪ್ರಕಾರ ಒಂದು ಟನ್ ದಷ್ಟ ಸತ್ತೆ ಕೋಳಿ ಗೊಬ್ಬರವನ್ನು ಮಣ್ಣಿನ ಗುಣಧರ್ಮ ಆಧರಿಸಿ 0.7 ಹೆಕ್ಟೇರ್ ವಿಸ್ತೀರ್ಣವರೆಗೆ ಅರ್ಥಾತ್ ಕೃಷಿ ಬೆಳೆಗಳಿಗೆ, 0.4 ಹೆಕ್ಟೇರ್ ಅಲ್ಪಾವಧಿಯ ಗೋಜಿನ ಜೋಳ, ಗೋಧಿ, ಭತ್ತದ ಬೆಳೆಗಳಿಗೆ, 10 ಹೆಕ್ಟೇರ್ ಬಹುವಾರ್ಷಿಕ ಬಾಳೆ, ಕಬ್ಬಿನ ಬೆಳೆಗಳಿಗೆ ಬಳಸಬಹುದು. ಕೋಳಿ ಗೊಬ್ಬರ ಹಾಕಿದರೆ ಬೆಳೆಗಳು ಸುಟ್ಟು ಹೋಗುತ್ತವೆ ಎಂಬ ತಪ್ಪು ಕಲ್ಪನೆಯನ್ನು ತೆಗೆದು ಹಾಕಿ ಮೇಲಿನ ಶಿಫಾರಸ್ಸಿನಂತೆ ವಿವಿಧ ಬೆಳೆಗಳಿಗೆ ಬಳಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದರೊಂದಿಗೆ ಸ್ಥಿರ ಆದಾಯ ಪಡೆಯಬಹುದು.

ಕೋಳಿ ಸಾಕಾಣಿಕಾ ಕೇಂದ್ರದಿಂದ ಕೋಳಿಹಿಕ್ಕೆ ಗೊಬ್ಬರವನ್ನು ತಂದ ತಕ್ಷಣ ನೇರವಾಗಿ ಬೆಳೆಗೆ ಉಪಯೋಗಿಸಬಾರದು. ಕೆಲವು ದಿನಗಳ ಕಾಲ ತಂಪಾದ ನೆರಳಿರುವ ಸ್ಥಳದಲ್ಲಿ ಶೇಖರಣೆ ಮಾಡಿ ಉಪಯೋಗಿಸುವುದರಿಂದ ಗೊಬ್ಬರದಲ್ಲಿ ಮತ್ತಷ್ಟು ಜೀವಾಣುಗಳು ರಚನೆಯಾಗಿ ಬೆಳೆಗಳ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಸಾಧ್ಯವಾದಮಟ್ಟಿಗೆ ಆರಂಭಿಕ ಹಂತದಲ್ಲಿ ಉಪಯೋಗಿಸದೆ, ಬೆಳೆಯ ಕನಿಷ್ಠ ಶೇ.25 ಬೆಳವಣಿಗೆ ಮುಗಿದ ನಂತರ ಹಾಗೂ ಜುಲೈದಿಂದ ಜನವರಿ ತಿಂಗಳುಗಳವರೆಗಿನ ತಂಪಾದ ವಾತಾವರಣದಲ್ಲಿ ಉಪಯೋಗಿಸಿದಲ್ಲಿ ಬಹುಪರಿಣಾಮಕಾರಿಯಾಗಿರುತ್ತದೆ.

■ ಬಸವರಾಜ ಗಿರಗಾಂವಿ, ಜಮಖಂಡಿ



21-09-2022
Samyuktha Kar. p.09

21-09-2022
Samyuktha Kar. p.09

ಧಾರವಾಡ ಕೃಷಿ ವಿವಿ ಕೃಷಿ ಮೇಳ- ರೈತರ ಜಾತ್ರೆ

ಸೆಪ್ಟೆಂಬರ್ 17 ರಿಂದ 20ರ ವರೆಗೆ ಜರುಗಿದ ಧಾರವಾಡದ ಕೃಷಿ ಮೇಳ ಲಕ್ಷಾಂತರ ಜನರ ಉಪಸ್ಥಿತಿಗೆ ಸಾಕ್ಷಿಯಾಯಿತು. 33 ವರ್ಷಗಳ ಹಿನ್ನೆಲೆಯ ಕೃಷಿ ಮೇಳ ಬರೀ ಉತ್ತರ ಕರ್ನಾಟಕ ವಲ್ಲ ಇಡೀ ರಾಜ್ಯದ ಜನಾಕರ್ಷಣೆಯ ಮೇಳ. ವಿವಿಧ ಪ್ರದರ್ಶನಗಳು, ರೈತರಿಗೆ ಮಾಹಿತಿ, ಪ್ರಾತ್ಯಕ್ಷಿಕೆ ಹಾಗೂ ಹೊಸ ಅವಿಷ್ಕಾರದ ತಿಳಿವಳಿಕೆ. ಜೊತೆಗೆ ಸಮೃದ್ಧ ಸ್ಟಾಲ್‌ಗಳಲ್ಲಿ ಅನೇಕಾನೇಕ, ಅದು ತಿಂಡಿ ತಿನಿಸು ಆಗಿರಲಿ ಅಥವಾ ಗೊಬ್ಬರ, ಬೀಜದ ಮಾಹಿತಿಯೇ ಸರಿ. ಧಾರವಾಡದ ಕೃಷಿ ಮೇಳ 4 ದಿನದ ಸಾಂಸ್ಕೃತಿಕ ಹಬ್ಬವೆಂದೆ ಪರಿಗಣಿತ.

- ಆದಾಯ ದ್ವಿಗುಣ- ಯತಸ್ಸಿ ರೈತರ ಯಶೋಗಾಥೆ
- ಕೃಷಿ ವಹಿವಾಟಿಗೆ ಸಾಮಾಜಿಕ ಜಾಲತಾಣ ಬಳಕೆ
- ಕೃಷಿ ಉತ್ಪನ್ನ ಮೌಲ್ಯವರ್ಧನೆ ತಿಳಿವಳಿ





ಕೃಷಿ ಕ್ಷೇತ್ರ ಅವಕಾಶಗಳ ಹೆಬ್ಬಾಗಿಲು

■ ವಿಶ್ವನಾಥ ಕೋಟಿ

ರೈತರ ಆದಾಯ ದ್ವಿಗುಣಗೊಳಿಸಲು ಮಹತ್ವಾಕಾಂಕ್ಷೆಯೊಂದಿಗೆ ಕೃಷಿಕರ ಜೀವನ ಹಸನಾಗಿಸಲು ವೈಜ್ಞಾನಿಕ ಕೃಷಿ ಪದ್ಧತಿ, ಸಮರ್ಪಕ ನೀರು ಬಳಕೆ ಕುರಿತು ಜಾಗೃತಿ ಮೂಡಿಸಲು ಧಾರವಾಡ ಕೃಷಿ ವಿಶ್ವವಿದ್ಯಾಲಯ ಸಂಘಟಿಸಿದಕೃಷಿ ಮೇಳಕ್ಕೆ ಸಮೀಪದ ಜಿಲ್ಲೆಗಳಷ್ಟಲ್ಲದೆ ರಾಜ್ಯದ ಮೂಲೆಮೂಲೆಗಳಿಂದ ಲಕ್ಷಾಂತರ ರೈತರು ಜಾತ್ರೆಯಂತೆ ಮುಗಿಬಿದ್ದಿದ್ದರು.

ಕಳೆದ ಸರಕಾರ 2013ರ ಮೇಳಗಳಲ್ಲಿ ಕೃಷಿ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿತ್ತು. ಇದಕ್ಕೆ ಪೂರಕವಾಗಿ ಕೃಷಿ ವಿವಿ ಮೇಳಗಳು ಆಯೋಜನೆಯಾಗುತ್ತಿವೆ. ಬೀಜಾಯಾಸಾಧ್ಯ ಕೃಷಿ ವಿಶ್ವವಿದ್ಯಾಲಯಗಳಿಂದ ಉಳುಮೆ ಮಾಡುವಲ್ಲಿ ಸಾಧನೆಗಳನ್ನು ಕೂಡಲೇ ಸಂಯೋಜಿಸಿರುತ್ತಾರೆ. ಒಕ್ಕಲುತನದಲ್ಲಿ ಅಲ್ಲ ಬದಲಾವಣೆ, ಜಾಗೃತಿಯಾದ ಸಾಕಣೆ, ಕೋಳಿ ಸಾಕಣೆ, ಜೇನು ಕೃಷಿ, ಎರೆಹುಳು ಗೊಬ್ಬರ ತಯಾರಿಕೆ ಮೊದಲಾದ ಚಟುವಟಿಕೆಗಳಿಂದಾಗಿ ಆರ್ಥಿಕವಾಗಿ ಸುಧಾರಿಸಿರುವ ರೈತರಾಗಿರುವ ಪ್ರತ್ಯಕ್ಷ ಮಾಹಿತಿ ಮಾಡಿಸಿದ್ದು ವಿಶೇಷವಾಗಿತ್ತು. ಇದಲ್ಲದೆ ರೈತರು ಸಾಧಿಸಿರುವ ಸಾಧನೆಗಳಿಂದ ಮಾಹಿತಿಗಳು ಮಳಿಗೆಗಳಿದ್ದವು.



ರೈತರು ವ್ಯಾಪಾರದ ಎಲ ಗಳಗಚ್ಚಿಕೊಡಿ. ಕೃಷಿಯಿಂದಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದು. ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡುವುದಕ್ಕೆ ಆದ್ಯತೆ ನೀಡಲಾಯಿತು. ಇದೇ ವಿಷಯವನ್ನು ಸಾಧಕ ರೈತರು ಪ್ರತಿಪಾದಿಸಿದರು. ಯುವ ರೈತರು ಸ್ಟಾರ್ಟ್ ಆಗುತ್ತಿದ್ದಾರೆ. ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕ ಬೆಳೆಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸಾಮಾಜಿಕ ಜಾಲತಾಣಗಳ ಸಹಾಯ ಪಡೆದುಕೊಂಡು ವ್ಯಾಪಾರ-ವಹಿವಾಟು ವಿಸ್ತರಿಸುತ್ತಿದ್ದಾರೆ.

ಬ್ಯಾಂಡಿಂಗ್ ಬಗ್ಗೆ ಕೂಡ ಗೋಷ್ಠಿ ಆಯೋಜಿಸಿ ಮಾಹಿತಿ ನೀಡಿರುವುದು ವಿಶೇಷ. ರೈತ ಉತ್ಪದಕ ಸಂಸ್ಥೆಗಳ ರಚನೆಯಿಂದ ರೈತರ ಉತ್ಪಾದನೆಗಳಿಗೆ ಮಚ್ಚಿನ ಮೌಲ್ಯ ಸಿಗುತ್ತಿರುವುದರಿಂದ ಇದರಬ್ಗೆ ರೈತರಲ್ಲಿ ಆಸಕ್ತಿ ಮೂಡಿಸಲಾಗಿದೆ. ಎಲ್ಲ ರೈತರೂ ನೀರಿನ ಸೌಲಭ್ಯ ಇರುವುದಿಲ್ಲ. ಆತ ಕಡಿಮೆ ನೀರು ಬಳಸಿಕೊಂಡು ಬೆಳೆಯಬಹುದಾದ ನೂತನ ವಾಣಿಜ್ಯ ಫಲಗಳ ಕೃಷಿ ಬಗ್ಗೆ ವಿಶೇಷ ಆದ್ಯತೆ ನೀಡಿ ಮಾಹಿತಿ ನೀಡಿರುವುದು ವಿಶೇಷ.

ಕಳೆದ ದಿ.17ರಿಂದ ಆರಂಭಗೊಂಡು ಮಂಗಳವಾರ ಸಂಜೆಗೆ ಗೊಂಡಿತು. ವಿಶ್ವವಿದ್ಯಾಲಯ ವ್ಯಾಪ್ತಿಯ 7 ಜಿಲ್ಲೆಗಳ 9 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಸಂಶೋಧನೆಯನ್ನು ಕೃಷಿ ತಾಂತ್ರಿಕತೆಗಳನ್ನು ರೈತರ ಕೃಷಿ ಭೂಮಿಯಲ್ಲಿ ಅಳವಡಿಸಲಾಗಿದ್ದು, ರೈತರು ಪ್ರಗತಿ ಸಾಧಿಸಿದ್ದಾರೆ. ರೈತರ ಯಶೋಗಾಥೆಯನ್ನು ರೈತ ಮೇಳಕ್ಕೆ ಬಂದ ರೈತರಿಗೆ ತಿಳಿಸುವ ಈ ಸಲದ ವೈಶಿಷ್ಟ್ಯ.





ಹಣದುಬ್ಬರ ನಿಯಂತ್ರಣದ ನೆಪದಲ್ಲಿ ಆರ್‌ಬಿಐ ಸತತವಾಗಿ ಬಡ್ಡಿ ದರ ಏರಿಕೆ ಮಾಡುತ್ತಿರುವುದು ಆರ್ಥಿಕ ಬೆಳವಣಿಗೆಗೆ ಅಂಕುಶ ಹಾಕಿದಂತೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ. ಇನ್ನು ಇದು ಸಾಕು ಎಂಬುದು ಎಲ್ಲರ ಒತ್ತಾಯ. ಹೀಗಾಗಿ ಸೆಪ್ಟೆಂಬರ್ ಅಂತ್ಯದ ಎಂಪಿಸಿ ಸಭೆ ತೀವ್ರ ಕುತೂಹಲ ಕೆರಳಿಸಿದೆ.

ಬಡ್ಡಿ ದರ ಏರಿಕೆ ಸಾಕು ಆರ್ಥಿಕ ಬಲ ಬೇಕು...!

ವಿಶ್ವಬ್ಯಾಂಕ್ ಎಚ್ಚರಿಕೆ

ವಿಶ್ವವ್ಯಾಪಿ ವಿದ್ಯಮಾನ ಬೇರೆ ಮುಂದಿನ ವರ್ಷ ಇಡೀ ಜಗತ್ತು ಭಾರೀ ಆರ್ಥಿಕ ಹಿಂಜರಿತಕ್ಕೆ ಸಿಲುಕಲಿದೆ ಎಂದು ಎಚ್ಚರಿಕೆ ನೀಡಿರುವುದು ಎಲ್ಲರಿಗೂ ನಡುಕ ಉಂಟು ಮಾಡಿದೆ. ಸದ್ಯಕ್ಕೆ ಹಿಂಜರಿತದ ಘಟನಾವಳಿ ನಿರ್ಧಾನವಾಗಿ ನಡೆ ಎತ್ತಲಾರಂಭಿಸಿದೆ. ಆದರೆ ಆದು ಕಟ್ಟಲು ಮುಂದಿನವರ್ಷದವರೆಗೂ ಕಾಯುವ ತಾಳ್ಮೆ ತೋರುತ್ತಿಲ್ಲ ಎಂಬುದೇ ಸಮಾಧಾನದ ಸಂಗತಿ. ಇದರಿಂದ ಜಾಗಗಲು ಏನಾದರೂ ದಾರಿ ಮತ್ತುಳಿದಂತಾಗಿದೆ ಆದೂ ಸಾಧ್ಯವಾಗುತ್ತಿಲ್ಲ. ಜಗದ್ಗುರು, ಜಗಮಾನ ವೈಪರೀತ್ಯ ಜಗತ್ತಿನ ದೈತ್ಯ ಆರ್ಥಿಕ ರಕ್ಷಣೆಗಳನ್ನೇ ಕುಡುಗೊಡಿಸಿದೆ. ಜಗಮಾನ ವೈಪರೀತ್ಯದ ಏಟ್ಟಿಲೆಯಲ್ಲಿ ಚೀನಾ, ಐರೋಪ್ಯ ಒಕ್ಕೂಟದ ದೇಶಗಳು, ಭಾರತ ಮುಂತಾದ ಸೂಪರ್‌ಪವರ್‌ಗಳ ಆರ್ಥಿಕ ಬೆಳವಣಿಗೆಯು ಬಿಡಿಮೇಲಾಗಿಹೋಗಿದೆ. ಬ್ಯಾಂಕ್ ರೇಟಿಂಗ್ ಸಂಸ್ಥೆಯಾದ ಫಿಚ್ ಭಾರತದ 2021-23ನೇ ಸಾಲಿನ ಜಿಡಿಪಿ ಬೆಳವಣಿಗೆ ದರದ ಅಂದಾಜನ್ನು ಶೇ.7.8ರಿಂದ ಶೇ.7ಕ್ಕೆ ಇಳಿಸಿದೆ. ಆರ್ಥಿಕ ಬೆಳವಣಿಗೆ ಜಿಡ್ಡಿನವ ನಿಟ್ಟಿನಲ್ಲಿ ಆರ್‌ಬಿಐ ಸದ್ಯಕ್ಕೆ ಬಡ್ಡಿ ದರ ಏರಿಕೆಗೆ ಬ್ರೇಕ್ ಹಾಕಬೇಕೆಂಬ ಒತ್ತಾಯ ಕೇಳಿ ಬರುತ್ತಿದೆ. ಇದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಒಂದಷ್ಟಾ ಹಣಲಿಕೆ, ವ್ಯವಹಾರ ವೆಚ್ಚಗಳು ಹೆಚ್ಚುವಷ್ಟರಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ. ಜಿಡಿಪಿ ಬೆಳವಣಿಗೆ ದರವೂ ಪ್ರಸ್ತುತ ಸ್ಥಿತಿಯಲ್ಲಿ ಏರಿಕೆಯಾಗುತ್ತದೆ ಎಂಬುದು ಆರ್ಥಿಕ ತಜ್ಞರ ಅಂಬೋಣ.

- ಎಂಪಿಸಿ ಸಭೆಯತ್ತ ಎಲ್ಲರಚಿತ್ತ
- ಈ ಬಾರಿ ಸೌಮ್ಯ ಸ್ವರೂಪದ ಏರಿಕೆ
- ಆರ್ಥಿಕ ಹಿಂಜರಿತದ ಭೀತಿ

ಹಣದುಬ್ಬರ ಆತಂಕ

ಆಗಸ್ಟ್ ತಿಂಗಳಲ್ಲಿ ಸಗಟು ಹಣದುಬ್ಬರ ದರ ಶೇ.12ರಷ್ಟಾಗಿದ್ದು, ಕಳದ ವರ್ಷ ಇದೇ ಅವಧಿಯಲ್ಲಿದ್ದ ಶೇ.13ಕ್ಕೆ ಮೇಲಿಳಿದರೆ ಸ್ವಲ್ಪ ಕಡಿಮೆಯಾದರೂ ರಿವರ್ಸ್ ಬ್ಯಾಂಕಿನ ಆತಂಕ ಇನ್ನೂ ದೂರವಾಗಿಲ್ಲ. ಆಹಾರ ಮತ್ತು ಚಿಲ್ಲರೆ ಹಣದುಬ್ಬರ ದರ ಇನ್ನೂ ಏರಿಕೆಯಲ್ಲೇ ಇದೆ. ಇಷ್ಟು ಆರೆಂಜಾನಿ ಒಳಕರಮಟ್ಟವಾದ ಶೇ.6ಕ್ಕಿಂತ ಮೇಲ್ಪಟ್ಟರಲ್ಲಿದೆ. ಸದ್ಯಕ್ಕೆಯೂ ಇಳಿಯುವ ಲಕ್ಷಣವಿಲ್ಲ. ಹೀಗಾಗಿ ಸೆಪ್ಟೆಂಬರ್ ಅಂತ್ಯದ ಎಂಪಿಸಿ ಸಭೆ ತೀವ್ರ ಕುತೂಹಲ ಕೆರಳಿಸಿದೆ. ಮತ್ತೊಮ್ಮೆ ಬಡ್ಡಿ ದರ ಏರಿಕೆಯಾದರೂ ಆಶ್ಚರ್ಯವಿಲ್ಲವಾಗಿದೆ. ಒಂದು ವೇಳೆ ಯಥಾಸ್ಥಿತಿ ಕಾಯ್ದುಕೊಂಡರೆ ಅದು ಪವಾಡವೇ ಸರಿ.

ಹಣದುಬ್ಬರ ಆತಂಕ

ಆಗಸ್ಟ್ ತಿಂಗಳಲ್ಲಿ ಸಗಟು ಹಣದುಬ್ಬರ ದರ ಶೇ.12ರಷ್ಟಾಗಿದ್ದು, ಕಳದ ವರ್ಷ ಇದೇ ಅವಧಿಯಲ್ಲಿದ್ದ ಶೇ.13ಕ್ಕೆ ಮೇಲಿಳಿದರೆ ಸ್ವಲ್ಪ ಕಡಿಮೆಯಾದರೂ ರಿವರ್ಸ್ ಬ್ಯಾಂಕಿನ ಆತಂಕ ಇನ್ನೂ ದೂರವಾಗಿಲ್ಲ. ಆಹಾರ ಮತ್ತು ಚಿಲ್ಲರೆ ಹಣದುಬ್ಬರ ದರ ಇನ್ನೂ ಏರಿಕೆಯಲ್ಲೇ ಇದೆ. ಇಷ್ಟು ಆರೆಂಜಾನಿ ಒಳಕರಮಟ್ಟವಾದ ಶೇ.6ಕ್ಕಿಂತ ಮೇಲ್ಪಟ್ಟರಲ್ಲಿದೆ. ಸದ್ಯಕ್ಕೆಯೂ ಇಳಿಯುವ ಲಕ್ಷಣವಿಲ್ಲ. ಹೀಗಾಗಿ ಸೆಪ್ಟೆಂಬರ್ ಅಂತ್ಯದ ಎಂಪಿಸಿ ಸಭೆ ತೀವ್ರ ಕುತೂಹಲ ಕೆರಳಿಸಿದೆ. ಮತ್ತೊಮ್ಮೆ ಬಡ್ಡಿ ದರ ಏರಿಕೆಯಾದರೂ ಆಶ್ಚರ್ಯವಿಲ್ಲವಾಗಿದೆ. ಒಂದು ವೇಳೆ ಯಥಾಸ್ಥಿತಿ ಕಾಯ್ದುಕೊಂಡರೆ ಅದು ಪವಾಡವೇ ಸರಿ.

ಅಂತಾರಾಷ್ಟ್ರೀಯ ವ್ಯಾಪಾರ

ಪ್ರಧಾನ ತೈಮಾಸಿಕ ಅವಧಿಯಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಭಾರತದ ಚಾಲ್ತಿ ಖಾತೆ ಕೊರತೆಯು(ಕ್ಯಾಡ್) ಒಟ್ಟು ಜಿಡಿಪಿಯ ಶೇ.3.6ರಷ್ಟಾಗಿದ್ದು, ದ್ವಿತೀಯ ತೈಮಾಸಿಕ ಅವಧಿಯಲ್ಲಿದ್ದ(ಜುಲೈ-ಸೆಪ್ಟೆಂಬರ್) ಇದು ಶೇ.5.0ಗೆ ಏರಿಕೆಯಾಗುವಸಂಭವ ಅಂದಾಜಿಸಲಾಗಿದೆ. ವಿಶೇಷವೆಂದರೆ ರಫ್ತು-ಆಮದಿನ ಯುದ್ಧ ಅರಂಭವಾದಾಗಿನಿಂದಲೂ ವಿಶ್ವವ್ಯಾಪಾರ ಮಂದಗತಿಯಲ್ಲಿಯೆ ಸಾಗುತ್ತಿದೆ. ಸರಕು ಮತ್ತು ಸೇವೆಗಳಿಗೆ ಬಾಹ್ಯ ಬೇಡಿಕೆ ತೀವ್ರವಾಗಿ ಕಡಿಮೆಯಾಗಿರುವುದು ಭಾರತದಂತಹ ದೇಶಗಳಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಡಾಲರ್ ವಿರುದ್ಧ ರೂಪಾಯಿ ಮೌಲ್ಯ ಇಳಿಕೆಯಲ್ಲೇ ಇರುವುದರಿಂದ ಆಮದು ದುಬಾರಿಯಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ 92 ಡಾಲರ್‌ಗೆ ಕುಸಿದಿದ್ದರೂ ನಾವು ಸಂಭ್ರಮಿಸುವ ಸ್ಥಿತಿಯಲ್ಲಿಲ್ಲ.

ಪ್ರಸ್ತುತ ಜಗತ್ತು ಎಕಕಾಲಕ್ಕೆ ಹಣದುಬ್ಬರ ಹಾಗೂ ಆರ್ಥಿಕ ಹಿಂಜರಿತ(ಸ್ಟಾಗ್ಫ್ಲೇಶನ್) ಸುಳಿಗೆ ಸಿಲುಕಿದ್ದು, ಮುಂದೆ ಇದರ ಪರಿಣಾಮ ಭಾರತದ ಮೇಲೂ ಉಂಟಾಗುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಮುಗಿಲಿಗೆ ಮಚ್ಚಿನಂತೆ ಕೈ ಏರಿದ ನಡತವರ ಅವದ್ಯಾಂಧದ ಕಡಿಗೆ ಮೊರೆ ಹೋಗಬೇಕಾದ ಅಸಾಮಾಯಕ ಸ್ಥಿತಿ ಸೃಷ್ಟಿಯಾಗಿರುವಂತಹ ನಿಜ.